


International Journal of Kannada Research
www.kannadajournal.com

**ISSN: 2454–5813**
IJKR 2017; 3(3): 28-32
© 2017 IJKR
www.kannadajournal.com
Received: 08-05-2017
Accepted: 09-06-2017

**ಬೋಜಮ್ಮ ಕೆ.ಎನ್**
ಸಹಾಯಕ ಪ್ರಾಧ್ಯಾಪಕರು,
ಶ್ರೀ.ಧ.ಮಂ.ಕಾಲೇಜು, ಉಜಿರೆ,
ದ.ಕನ್ನಡ.ಜಿಲ್ಲೆ

**Correspondence**
**ಬೋಜಮ್ಮ ಕೆ.ಎನ್**
ಸಹಾಯಕ ಪ್ರಾಧ್ಯಾಪಕರು,
ಶ್ರೀ.ಧ.ಮಂ.ಕಾಲೇಜು, ಉಜಿರೆ,
ದ.ಕನ್ನಡ.ಜಿಲ್ಲೆ

# ಆಧುನಿಕ ಮಹಿಳಾ ಕಾವ್ಯದಲ್ಲಿ 'ಬುದ್ಧ'

**ಬೋಜಮ್ಮ ಕೆ.ಎನ್**

ಕ್ರಿ.ಪೂ. ಕಾಲಘಟ್ಟದಲ್ಲಿ ಜೀವಿಸಿದ್ದ ಬುದ್ಧ ಸಾಧಿಸಿದ ಸಾಧನೆ, ಮಾಡಿದ ಹೋರಾಟ ಮಹತ್ವದ್ದು. ಬುದ್ಧನು ತುಳಿದ ದಾರಿ ಕ್ರಾಂತಿಕಾರಿಯಾದುದು, ಹಾಗೂ ಅಷ್ಟೇ ಜನಪರವಾದುದು ಮತ್ತು ಮಾನವೀಯ ಮೌಲ್ಯಗಳಿಂದ ಕೂಡಿದ್ದು. ಮತಮೌಢ್ಯಗಳನ್ನು ಧಿಕ್ಕರಿಸಿ ಜಾತಿ–ಭೇದಗಳನ್ನು ಅಲ್ಲಗಳೆದ 'ಬುದ್ಧ' ಸಾಮಾಜಿಕ ಸಮಾನತೆಯನ್ನು ಸಾರಿದವನು. ಆಧ್ಯಾತ್ಮದೊಟ್ಟಿಗೆ ವೈಜ್ಞಾನಿಕ, ವೈಚಾರಿಕ ಹಾಗೂ ಪ್ರಜಾಸತ್ತೆಯ ಅಂಶಗಳನ್ನು ಒಟ್ಟೊಟ್ಟಿಗೆ ಭೋಧಿಸಿದ. ಅಹಿಂಸೆಯ ಮೂಲಕ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಹಾಗೂ ರಾಜಕೀಯ ಸುಧಾರಣೆಯ ಬಗ್ಗೆ ಚಿಂತಿಸಿದವರಲ್ಲಿ ಬುದ್ಧಗುರು ಪ್ರಪ್ರಥಮರು. ಬುದ್ಧ, ಶಾಂತಿಗೆ, ಸಮಾನತೆಗೆ, ಅಹಿಂಸೆಗೆ, ಪ್ರೀತಿಗೆ ಮತ್ತು ವೈಚಾರಿಕತೆಗೆ ಸಂಕೇತ. ದೇವರು, ಗುರು ಮತ್ತು ಶಾಸ್ತ್ರಗಳ ಅವಲಂಬನೆ ಮತ್ತು ನಿರ್ದೇಶನಗಳನ್ನು ದಿಟ್ಟತನದಿಂದ ನಿರಾಕರಿಸಿ, ಧಾರ್ಮಿಕ ಅಹಿಂಸೆಗೆ ಒಂದು ಬಗೆಯ ಸ್ವಾವಲಂಬನೆಯನ್ನೂ, ಧೈರ್ಯವನ್ನೂ, ಸ್ವತಂತ್ರವಾಗಿ ವಿಚಾರ ಮಾಡುವಂತಹ ಪ್ರವೃತ್ತಿಯನ್ನು ತಂದುಕೊಟ್ಟವರೇ ಬುದ್ಧಗುರು.

ಪ್ರತಿಯೊಬ್ಬ ಮನುಷ್ಯನೂ ಗೌರವದಿಂದ ಬದುಕಲು ಅವಕಾಶವಿರುವ 'ಬೌದ್ಧಧರ್ಮ' ಹಾಗೂ 'ಬುದ್ಧ'ನ ತಾತ್ವಿಕ ಚಿಂತನೆಗಳು ಮತ್ತು 'ಬುದ್ಧ'ನ ಬದುಕು ಕನ್ನಡನಾಡಿನ ಅನೇಕ ಕವಿಗಳಿಗೆ ವಸ್ತುವಾಗಿವೆ. ಕನ್ನಡದಲ್ಲಿ ಬುದ್ಧನ ಕುರಿತು ಒಂದು ಕಾವ್ಯ ಪರಂಪರೆಯೇ ಇದೆ. ನವೋದಯದ ಕುವೆಂಪು ಅವರಿಂದ ಹಿಡಿದು ದಲಿತ ಬಂಡಾಯದವರೆಗಿನ ಎಲ್ಲಾ ಕಾಲಘಟ್ಟದ ಕವಿಗಳು ಬುದ್ಧನ ಕುರಿತು ಕಾವ್ಯರಚನೆ ಮಾಡಿದ್ದಾರೆ. ಬುದ್ಧನ ವ್ಯಕ್ತಿತ್ವವನ್ನು ತಮ್ಮ ಕಾವ್ಯಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ವರ್ತಮಾನದಲ್ಲಿ ಜನರು ಬುದ್ಧನ ವಿಚಾರಗಳಿಗೆ ವಿಮುಖವಾಗಿ ನಡೆದುಕೊಳ್ಳುತ್ತಿರುವ ಬಗ್ಗೆ ವಿಷಾದವನ್ನೂ ವ್ಯಕ್ತಪಡಿಸಿದ್ದಾರೆ. ಕನ್ನಡದ ಎಲ್ಲ ಕವಿಗಳ ಕವನ ಸಂಕಲನಗಳನ್ನು ಪರಿಶೀಲಿಸಿದರೆ ಬುದ್ಧನ ಕುರಿತು ಒಂದು ಅಥವಾ ಎರಡು ಕವಿತೆಗಳಾದರೂ ಸಿಕ್ಕೇ ಸಿಗುತ್ತದೆ. ಆಧುನಿಕ ಮಹಿಳಾ ಕವಿಗಳು 'ಬುದ್ಧ'ನನ್ನು ಗೌರವಿಸಿ ಸ್ಮರಿಸಿದ ಹಾಗೂ ಅವನ ಬದುಕನ್ನು ಚಿತ್ರಿಸಿದ ರೀತಿಯನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಆಧುನಿಕ ಮಹಿಳಾ ಕನ್ನಡ ಸಾಹಿತ್ಯದ ಮೇಲೆ 'ಬುದ್ಧ' ಬಹಳಷ್ಟು ಪ್ರಭಾವ ಬೀರಿದ್ದಾನೆ. "ಆಧುನಿಕ ಮಹಿಳಾ ಕಾವ್ಯದಲ್ಲಿ ನಮ್ಮ ಚರಿತ್ರೆ ಮತ್ತು ಪುರಾಣಗಳ ಬಗೆಗೆ ದೊಡ್ಡ ಪ್ರಮಾಣದ ಸಂಕಥನವೆ ನಿರ್ಮಾಣವಾಗಿದೆ ತನ್ನ ಬಹುತೇಕ ಅರ್ಧ ಭಾಗ ಎಂಬಷ್ಟು ಗಾಢವಾಗಿ ಆಧುನಿಕ ಮಹಿಳಾ ಕಾವ್ಯದ ವಸ್ತುವು ನಮ್ಮ ಪ್ರಕಾರ ಚರಿತ್ರೆಗಳದ್ದೇ ಆಗಿದೆ. ಮತ್ತೆ ಮತ್ತೆ ಹತ್ತಾರು ಕವಿಗಳು ಇವನ್ನು ಕಥಿಸುತ್ತ ಬಂದಿದ್ದಾರೆ. ಅನೇಕ ಪಾತ್ರಗಳನ್ನು ಮತ್ತು ಪ್ರಸಂಗಗಳನ್ನು ಪುನರ್ ಪುನರಪಿ ಮರುಕಥನೀಕರಣಕ್ಕೆ ಗುರಿಮಾಡಿದ್ದಾರೆ. ಅಕ್ಕನನ್ನು ಬಿಟ್ಟರೆ ನಮ್ಮಲ್ಲಿ ಹೆಚ್ಚು ಕಥನಕ್ಕೆ ಗುರಿಯಾಗಿರುವವನು ಬುದ್ಧ".(ಬೇಗೂರು, ೨೦೧೪, ಪುಟ ೨೧) ಸಾಮಾಜಿಕ ಸಂದರ್ಭದಲ್ಲಿ ಹೆಣ್ಣಿಗೆ ಆಗುವ ಅವಮಾನ, ಅಘಾತ, ಶೋಷಣೆಗಳನ್ನು ಮೊದಲು ಗಟ್ಟಿಯಾಗಿ ತಾತ್ವಿಕವಾಗಿ ಪ್ರಶ್ನಿಸಿದವನು ಮತ್ತು ಪ್ರತಿಭಟಿಸಿದವನು 'ಗೌತಮಬುದ್ಧ'. ಕ್ರಿ.ಪೂ. ಆರನೇ ಶತಮಾನದಲ್ಲಿ ಬೌದ್ಧ ಧರ್ಮದ ನೇತಾರನಾಗಿ ಆ ಧರ್ಮಕ್ಕೆ ವೈಚಾರಿಕ ನೆಲೆಗಟ್ಟನ್ನು ಹಾಕಿ ಧರ್ಮದೊಡನೆ ಸಾಮಾಜಿಕ ಜಾಗೃತಿ, ಪರಿವರ್ತನೆಯನ್ನು ಮಾಡಿದ ಹಿರಿಮೆ 'ಬುದ್ಧ'ನದು. ವರ್ಗ–ವರ್ಣ, ಲಿಂಗ–ಭೇದಗಳನ್ನು ಅಳಿಸಿ ಹಾಕಿ ಮಾನವ ಕುಲ ಒಂದೇ ಎಂದು ಬೋಧಿಸಿದ. ಅಸಮಾನತೆಯಿಂದ ಕುಗ್ಗಿ ಹೋಗಿದ್ದ ಸ್ತ್ರೀ ಶಕ್ತಿಯ ಅನನ್ಯತೆಯನ್ನು ಗುರುತಿಸಿ; ಗಂಡು ಹೆಣ್ಣುಗಳ ನಡುವೆ ಕೇವಲ ದೈಹಿಕ ಅಂತರ ಮಾತ್ರ, ಮೂಲಭೂತವಾಗಿ ಇಬ್ಬರೂ ಒಂದೇ ಎಂಬ ಸತ್ಯವನ್ನು ಜಗತ್ತಿಗೆ ಮೊದಲು ಸಾರಿದವನು

'ಗೌತಮಬುದ್ಧ'. ಸಾಮಾಜಿಕ ನ್ಯಾಯ, ಸ್ತ್ರೀ ಸಮಾನತೆ, ಅಭಿವ್ಯಕ್ತಿ ಸ್ವಾತಂತ್ರ್ಯಗಳ ಮೂಲಕ ಸರ್ವರಿಗೂ ಧಾರ್ಮಿಕತೆ, ಆಧ್ಯಾತ್ಮಿಕತೆಗೆ ಮುಕ್ತ ಪ್ರವೇಶ ನೀಡಿದ ಮೊದಲ ದಾರ್ಶನಿಕ ಈತ.

'ಬುದ್ಧ' ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸಿದವನು ಮತ್ತು ವಾಸ್ತವವಾದಿ. ವೈಚಾರಿಕ ನೆಲೆಗಟ್ಟಿನ ಮೇಲೆ ಬದುಕನ್ನು ಕಟ್ಟಿಕೊಳ್ಳುವ ಮಾರ್ಗ ತೋರಿದಾತ. ಅತಿ ಲೋಲುಪತೆ ಮತ್ತು ಅತಿ ವಿರಕ್ತಿ ಎಂಬ ಎರಡು ಅತಿಗಳನ್ನು ನಿರಾಕರಿಸಿ ಮಧ್ಯಮ ಮಾರ್ಗವನ್ನು ಅನುಸರಿಸಲು ಉಪದೇಶಿಸಿದನು. ಮನುಷ್ಯ ನೆಮ್ಮದಿಯಿಂದ ಬದುಕಬೇಕಾದರೆ 'ಬುದ್ದ'ನ ಮಧ್ಯಮ ಮಾರ್ಗ ಅನಿವಾರ್ಯ ಆದರೆ ವಸ್ತು ಸ್ಥಿತಿಯನ್ನು ಅರಿಯುವ ಶಾಂತಿ ನೆಮ್ಮದಿಗಳನ್ನಂಟು ಮಾಡುವ ಮಧ್ಯಮ ಮಾರ್ಗದ ಅನುಸರಣೆ ಅತೀ ಕಷ್ಟ ಎಂದು ಕವಿ ಸಂಧ್ಯಾದೇವಿಯವರು ತಮ್ಮ 'ಬುದ್ಧನ ಪ್ರೇಮಿ' ಕವನದಲ್ಲಿ ವಿವರಿಸುತ್ತಾರೆ.

ಬುದ್ಧನ ಪ್ರೇಮಿ, ಹೀಗೆ !
ಹೀಗೆಯೇ ಇರಬೇಕಾದದ್ದು
ತಾವರೆ ಎಲೆಯ ಮೇಲೆ
ಒಂದು ಬಿಂದು ನೀರ ಹನಿ
(ಬುದ್ಧನ ಪ್ರೇಮಿ,ಸಂಧ್ಯಾದೇವಿ, ೨೦೦೫, ಪುಟ ೨೭)

'ಬುದ್ಧ' ಎಂದರೆ ಆತನಿಗೆ ಒಂದು ಮುಖ ಮಾತ್ರ ಇಲ್ಲ. ಇವನು ಒಂದು ಅರ್ಥಕ್ಕೆ ಮಾತ್ರ ಪ್ರತೀಕ ಅಲ್ಲ. ಹಲವು ರೀತಿಯಲ್ಲಿ ಈತ ವ್ಯಾಖ್ಯಾನಕ್ಕೆ ಗುರಿಯಾಗಿದ್ದಾನೆ. ಈತ ಸಂಸಾರವನ್ನು ಬಿಟ್ಟು ಹೋದವನಲ್ಲ. ತಾವರೆ ಎಲೆಯ ಮೇಲಿನ ಒಂದು ಬಿಂದು ನೀರ ಹನಿಯಂತೆ' ಈತ ಸಂಸಾರದಲ್ಲಿ ಇದ್ದೂ ಅದಕ್ಕೆ ಅಂಟದೆ ಇದ್ದವನು ಎಂದು ಚಿತ್ರಿಸಿದ್ದಾರೆ. 'ಬುದ್ಧ' ನಡೆದ ದಾರಿ ಅನನ್ಯವಾದದ್ದು, ಇವನ ದಾರ್ಶನಿಕತೆ ಬಹಳ ಮುಖ್ಯವಾಗಿ ಲೌಕಿಕವಾದದ್ದು. ಆಸೆ ಪಡದಂತಿರುವುದು, ಸುಖದ ಮೋಹಕ್ಕೆ ಅಂಟಿಕೊಳ್ಳದಿರುವುದು. ಸುಖ ಸಾಧನಗಳ ದಾಹಕ್ಕೆ ಬಲಿ ಬೀಳದಿರುವುದು. ಅವುಗಳ ಮುಖಾಂತರ ಬದುಕಿನಲ್ಲಿ ಶಾಂತಿಯನ್ನು ಹೊಂದುವುದು, ಇಂತಹ ಉದಾತ್ತ ಮೌಲ್ಯಗಳ ಅನುಸರಣೆಯಲ್ಲಿ ತೊಡಗುವುದು ಸಾಮಾನ್ಯನಿಗೆ ಕಷ್ಟಸಾಧ್ಯ ಎಂಬ ಸತ್ಯವನ್ನು ರೂಪ ಹಾಸನ ಅವರ ಕವನ ಕಟ್ಟಿಕೊಡುತ್ತದೆ.

ಮನಸಿನಾಳದಿಂದ
ಎದ್ದ ಬುದ್ಧ ಈಗ
ಮತ್ತೆ ಬಂದಿದ್ದಾನೆ
..........................
ಹೇಳುತ್ತಾನೆ ಒಂದೇ ಪ್ರಶ್ನೆ
ಈಗ ಬರುವೆಯಾ ನನ್ನೊಡನೆ ?
ನನ್ನದು ಮತ್ತದೇ
ಹಳಸಲು ಕಾರಣಗಳು
ಅವನಿಂದ ತಪ್ಪಿಸಿಕೊಳ್ಳಲು
ಬದುಕಿನಾಮಿಷದ ನೆಪಗಳು !
ನಗುತ್ತಾ ಒಳ ಹೋಗಿ ಬಿಡುತ್ತಾನೆ
ಆ ನಗೆಗೆಷ್ಟು ಅರ್ಥಗಳು !
..........................
ಇತ್ತೀಚೆಗವನು ನಗುವುದಿಲ್ಲ !
ಮಹಾಮೌನಿಯಾಗಿದ್ದಾನೆ
ನಾನು ಹೆದರುತ್ತೇನೆ.
..........................
ಆಳಕ್ಕಿಳಿಯುವುದು ಸುಲಭದ ಮಾತೆ
(ಮುಖಾಮುಖಿ, ಬಾಗಿಲಾಚೆ ಯಮೌನ, ಪುಟ-೧೮,
೧೯)

'ಬುದ್ಧ'ನ ನಿಗೂಢ ಮಹಾಮೌನದ ಹಿಂದಿರುವ ಅರ್ಥವನ್ನು ಗ್ರಹಿಸಲು ಸಾಧ್ಯವಾಗದ ತನ್ನ ಮಾನಸಿಕ ಅಸಹಾಯಕತೆಯ ಬಗ್ಗೆ ಕವಿಯತ್ರಿಗೆ ಇರುವ ಬೇಸರವನ್ನು ಈ ಕಾವ್ಯದ ಮೂಲಕ ವ್ಯಕ್ತಪಡಿಸುತ್ತಾರೆ. ಇದೇ 'ಬುದ್ಧ' ಇನ್ನೊಬ್ಬ ಕವಿಗೆ ಮೈತ್ರಿ-ಕರುಣೆಯ ಸಾಕಾರ ಮೂರ್ತಿ. ಆಶೆಯೇ ದುಃಖಕ್ಕೆ ಮೂಲ, ಜೀವನವು ನಶ್ವರ ಎಂಬ ಮೌಲ್ಯವನ್ನು ಜಗತ್ತಿಗೆ ಸಾರಿದ ಬುದ್ಧನ ತತ್ವಗಳ ಅನುಸರಣೆಯಲ್ಲಿ ಕಷ್ಟಸಾಧ್ಯವಾಗಿರುವ ಕವಿಯ ಸಂದಿಗ್ಧ ಪರಿಸ್ಥಿತಿಯನ್ನು ಈ ಕವನ ವಿವರಿಸುತ್ತದೆ. ವಿಷ್ಣುವಿನಂತಹ ಪ್ರಸನ್ನವದನನಾದ. ಡೊಳ್ಳು ಹೊಟ್ಟೆಯ ಅಡ್ಡಬಾಯಿಯ ಜೋಕರನಂತೆ ಕಾಣುವ ಲಾಫಿಂಗ್ ಬುದ್ಧನನ್ನು ಆಧುನಿಕರು ಮನೆಯಲ್ಲಿ ಇಟ್ಟುಕೊಳ್ಳುವುದು ಒಂದು ಫ್ಯಾಶನ್. ಬುದ್ಧನ ಜೊತೆಯಲ್ಲಿಯೇ ಗಾಂಧಿ, ಅಂಬೇಡ್ಕರ್ ಮೂರ್ತಿಯನ್ನು ಮನೆಗೆ ತಂದು ಇಟ್ಟುಕೊಳ್ಳುತ್ತೇವೆ ಆದರೆ ಅವರ ತಾತ್ವಿಕ ಮೌಲ್ಯಗಳನ್ನು ರೂಢಿಸಿಕೊಳ್ಳಲು ಎಡವಿದ್ದೇವೆ ಎಂಬ ಸತ್ಯವನ್ನು ಕವಿ ಸವಿತಾ ನಾಗಭೂಷಣ ಅವರು ತಮ್ಮ 'ಬಜಾರಿನಲ್ಲಿ ಬುದ್ಧ' ಕವನದಲ್ಲಿ ವಿವರಿಸುತ್ತಾರೆ.

ಇಪ್ಪತ್ತು ವರುಷವಾಯಿತು ಬುದ್ಧ
ನಮ್ಮಲ್ಲಿಗೆ ಬಂದು
ನಮ್ಮೊಂದಿಗೆ ನಿಂದು, ನೊಂದು, ಬೆಂದು;
ಈಗವನು ನಮ್ಮವನು, ನಮ್ಮಲ್ಲೇ ಒಂದು
ಇನಿತೂ ಬದಲಾಗಿಲ್ಲ ......... .........
............... ............. .........
......... ......... .........
ನಾವು ಅಷ್ಟೆ ಇನಿತೂ ಬದಲಾಗಿಲ್ಲ!
ಅದೇ ವೇಗ,ಅದೇ ಭೋಗ,
ಅದೇ ತನ್ನಾ...ಅದೇ ತಲ್ಲಣ!!
(ಸವಿತಾನಾಗಭೂಷಣ, ೨೦೦೯, ಪುಟ ೨೧)

ಬುದ್ಧನ ಮೂರ್ತಿ ನಮ್ಮೊಂದಿದ್ದರೆ ಸಾಲದು ಆತನ ಮೌಲ್ಯವನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು. ಆದರೆ ಹಾಗೆ ನಡೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ನಮ್ಮ ಬದುಕು ಅನಿತ್ಯ, ಅಶ್ವಾಶತ ಎಂಬ ಸತ್ಯದ ದರ್ಶನವಾಗಿದ್ದರೂ ಅದನ್ನು ಅನುಷ್ಠಾನಕ್ಕೆ ತರುವಲ್ಲಿ ವಿಫಲರಾಗುತ್ತವೆ. ಆಶೆ ಎಂಬ ಮನೋದಾಸ್ಯಕ್ಕೆ ಒಳಗಾಗುವ ಜೀವಿಗೆ ದುಃಖ ತಪ್ಪಿದಲ್ಲ ಎಂಬ ವಾಸ್ತವತೆಯ ಅರಿವಿದ್ದರೂ ಅದರಿಂದ ಬಿಡಿಸಿಕೊಳ್ಳಲಾರದೆ ಒದ್ದಾಡುತ್ತೇವೆ. ಮಾನಸಿಕ ನೆಮ್ಮದಿಯನ್ನು ಕಳೆದುಕೊಂಡು ಹತಾಶರಾಗುತ್ತೇವೆ. ಈ ವಸ್ತುಸ್ಥಿತಿಯ ಅರಿವಿದ್ದರು ಅದನ್ನು ಮಾಡಲಾಗುತ್ತಿಲ್ಲವೆಂಬ ಪ್ರಾಮಾಣಿಕ ಅಸಾಯಕತೆಯನ್ನು ಕವಿ ಇಲ್ಲಿ ವ್ಯಕ್ತಪಡಿಸುತ್ತಾರೆ.

'ಬುದ್ಧ' ತನ್ನ ವಿಚಾರಗಳ ಅನುಷ್ಠಾನಕ್ಕಾಗಿ ಕಟ್ಟಿದ ಸಂಘ ಸ್ಥಾವರ ರೂಪದ್ದಾಗಿರಲಿಲ್ಲ ಅದೊಂದು ಚಲನಶೀಲ ವ್ಯವಸ್ಥೆ. ಈ ವ್ಯವಸ್ಥೆ ಒಳಗೆ ಆತನ ಕಾಲದ ವಿವಿಧ ಸಾಮಾಜಿಕ ಸ್ತರಕ್ಕೆ ಸೇರಿದವರೆಲ್ಲರು ಇದ್ದರು. ಹಿಂದೂ ಧರ್ಮದ ಶ್ರೇಣೀಕರಣ ವ್ಯವಸ್ಥೆಯಲ್ಲಿ ಮೇಲ್ಜಾತಿ ಬ್ರಾಹ್ಮಣರಿಂದ ಹಿಡಿದು 'ಸುನೀತ'ನಂತಹ ಅಸ್ಪೃಶ್ಯ ಮಾತ್ರವಲ್ಲದೆ ಮಹಿಳೆಯರು ಇದ್ದರು. ಎಲ್ಲರನ್ನು ಸಮಾನವಾಗಿ ಕಾಣುತ್ತಿದ್ದ ಮತ್ತು ಸ್ವಾತಂತ್ರ್ಯವನ್ನು ನೀಡಿದ್ದ. ಪ್ರತಿಯೊಬ್ಬರಿಗೂ ತಮ್ಮ ಅಭಿಪ್ರಾಯವನ್ನು ಮುಕ್ತವಾಗಿ

ಹೇಳಿಕೊಳ್ಳುವ ಅವಕಾಶ 'ಸಂಘ'ದಲ್ಲಿ ಇತ್ತು. 'ಸುನಿತಾ'ನಂತಹ ಧ್ವನಿಯಿಲ್ಲದವರಿಗೆ 'ಬುದ್ಧ' ಧ್ವನಿಯಾಗಿದ್ದ. 'ಬುದ್ಧ'ನ ಬದುಕಿನ ಸುಧೀರ್ಘ ನಡಿಗೆ ಮತ್ತು ಚಿಂತನೆಯು ಸದಾ ಪ್ರೇಮಪೂರ್ಣ, ಮುಕ್ತ ಹಾಗೂ ವಿಶಾಲವಾದದ್ದು. 'ಬುದ್ಧ' ವಾಸ್ತವವಾಗಿ ವೈಚಾರಿಕ ಹಾದಿಯಲ್ಲಿ ನಡೆದವನು. ಜಾತಿ ಸಂಕೋಲೆಗಳಿಂದ ಜನರನ್ನು ಮುಕ್ತಗೊಳಿಸಿ ತಾನು ನಂಬಿದ ಮಾನವೀಯ ಧರ್ಮದಲ್ಲಿ ನೆಲೆಗೊಳಿಸಿದವನು. ಅವನ ತಾತ್ವಿಕತೆಯ ದಾರಿಯಲ್ಲಿ ನಡೆದವನಿಗೆ ಸಾವಿಲ್ಲ, ಕ್ಷಾಮವಿಲ್ಲ ಪ್ರಕಟವಾಗಬೇಕಷ್ಟೇ ಎಂದು ಕವಿ ಸಂಧ್ಯಾದೇವಿಯವರ ಅಭಿಪ್ರಾಯ.

ಇದುವೇ ಸರಿಯಾದ ಕಾಲ
ನೋಡು ಮುಗಿಲು ಒಟ್ಟು ಕೂಡುತಿದೆ
ಸಣ್ಣಕ್ಕೆ ಮಳೆ ಹನಿಯುತಿದೆ
ಬೀಜಕ್ಕೆ ಯಾರೋ ಹೇಳುತ್ತಾರೆ
ಪ್ರಕಟವಾಗಲಿಕ್ಕೆ !
..........................
ಆದರೆ ಸುಜ್ಞಾನಕ್ಕೆ ಸಾವಿಲ್ಲ
(ಬುದ್ಧನ ಪ್ರೇಮಿ,ಸಂಧ್ಯಾದೇವಿ, ೨೦೦೫, ಪುಟ ೨೭)

ನಾವು ಪೂಜಿಸುವ ದೇವರೆ ಮನುಷ್ಯ ವಿರೋಧಿಯಾದರೆ, ಮನುಷ್ಯ ಮನುಷ್ಯನ ನಡುವೆ ಅಂತರ ಸೃಷ್ಟಿಸಿದರೆ ಅಂತಹ ದೇವರು ನಂಬಿಕೆಗೆ ಅರ್ಹನಲ್ಲ. ಜನರ ನಡುವೆಯೇ ಬದುಕಿದ್ದ 'ಬುದ್ಧ' ಜನರಲ್ಲಿ ನಂಬಿಕೆಯನ್ನು ಹುಟ್ಟಿಸಿದವನು. "ಬುದ್ಧ ಬಿತ್ತಿದ ಸುಜ್ಞಾನಕ್ಕೆ ಸಾವಿಲ್ಲ, ಸುಭಿಕ್ಷಕ್ಕೆ ಕ್ಷಾಮವಿಲ್ಲ". ಈ ಕವನದಲ್ಲಿ ಕವಿ 'ಬುದ್ಧ'ನನ್ನು ಮಳೆ ಹನಿಗೂ 'ಸುನೀತ'ನನ್ನು ಬೀಜಕ್ಕೂ ಹೋಲಿಸಿದ್ದಾರೆ. ಮತ್ತೊಬ್ಬ ಕವಿ ಇದೇ 'ಬುದ್ಧ'ನನ್ನು ಹೂವಿನೊಂದಿಗೆ ಸಮೀಕರಿಸಿ ಬುದ್ಧ ತತ್ವಗಳ ಸಾರವನ್ನು ಹೂವಿನ ಸೌಂದರ್ಯ, ಸರಳತೆಯೊಂದಿಗೆ ತಾದಾತ್ಮ್ಯಗೊಳಿಸಿದ್ದಾರೆ.

ಗರ್ವವೆಂಬುದು
ಹೂವಿನ ಬಳಿ
ಸುಳಿಯದು
ಎಷ್ಟೊಂದು ಚೆಲವು
ಘನವಾದ ಒಲವು
ನಿರಂತರ
ಧ್ಯಾನದ ಫಲವು
ಮೈತ್ರಿ-ಕರುಣೆ
ಎಂದು ಬುದ್ಧ
ಬೋಧಿಸಿದ್ದ
ಪೂರ್ವಜನ್ಮದ ಸ್ಮರಣೆ
ಅವನು ಹೂವಾಗಿದ್ದ
(ಬುದ್ಧ ಮತ್ತು ಹೂವು, ಸವಿತಾನಾಗಭೂಷಣ, ಪುಟ ೨೧೭)

'ಬುದ್ಧ' ತನ್ನ ಪೂರ್ವಜನ್ಮದಲ್ಲಿ ಹೂವಾಗಿದ್ದ, ನಿರಂತರ ಧ್ಯಾನದ ಫಲದಿಂದ ಮೈತ್ರಿ-ಕರುಣೆಗಳನ್ನು ಸಿದ್ಧಿಸಿಕೊಂಡಿದ್ದ ಮತ್ತು ನಿರ್ಗವಿಯಾಗಿದ್ದ ಎಂಬುದಾಗಿ ಕವಿ ತನ್ನ ಭಾವಕ್ಕೆ ತಕ್ಕಂತೆ 'ಬುದ್ಧ'ನನ್ನು ಹೂವಿಗೆ ಹೋಲಿಸುತ್ತಾರೆ.

ಬುದ್ಧನ ಗುಣಗಳನ್ನು ಕೀರ್ತಿಸುವ ಮತ್ತು ಆತನ ಪಾತ್ರವನ್ನು ಋಣಾತ್ಮಕವಾಗಿ ನಿರೂಪಿಸುವ ಎರಡೂ ಕೆಲಸವನ್ನು ಆಧುನಿಕ ಮಹಿಳಾ ಕಾವ್ಯ ಮಾಡಿದೆ. ಚೇತನಾ ತೀರ್ಥಹಳ್ಳಿಯವರ 'ಬುದ್ಧಸಿಕ್ಕರೆ' ಕವನದಲ್ಲಿ ಬುದ್ಧನನ್ನು ಕಟಕಟೆಯಲ್ಲಿ ನಿಲ್ಲಿಸಿ ತಪ್ಪಿತಸ್ಥನಂತೆ ಆರೋಪಿಸಿ ಸವಾಲನ್ನು ಮಾಡುತ್ತದೆ.

ಬುದ್ಧ ಎಂದರೆ / ಜಗಕೆ ಜೋಗುಳ ಹಾಡಿ
ನಿದ್ದೆಗೆಟ್ಟವನು
ನಡುರಾತ್ರಿ ಕದವಿಕ್ಕಿ / ಮನೆ ಬಿಟ್ಟವನು
ಬುದ್ಧ ಎಂದರೆ ನನಗೆ / ಯಶೋಧರೆಯ ಕಣ್ಣೀರು
..........................
ಬುದ್ಧ ..................
ಖಂಡಾಯದ ಬೀಜ
ಶಾಂತಿಯೊಡಲಿನ / ಕ್ರಾಂತಿ ಬೋಧೆ
ಪುಟ್ಟರಿಯದೆ / ಬೆಳಗುವ
ಮಿಣುಕು ಹುಳ
ಬುದ್ಧ / ಪಡುವಣದಿಂದ
ಮೂಡಣಕ್ಕೆ ಹರಿದ / ಏಕೈಕ ಬೆಳಕು
..........................
ಹೀಗೆಲ್ಲಿ ಇರುವ ಬುದ್ಧ / ಹೊರಗೆ ಕಂಡರೆ
ಕೊಂದು ಹಾಕು !
('ಬುದ್ಧಸಿಕ್ಕರೆ' ಶಬರಿಯ ಅವಸರ, ೨೦೦೪, ಪುಟ-೦೯)

ಆರಂಭದಲ್ಲಿ ಕವನ 'ಬುದ್ಧ'ನ ಯಶಸ್ವಿಗೆ ಕಾರಣವಾದ ಯಶೋಧರೆಯ ಮನೋಸ್ಥಿತಿಯನ್ನು ಚಿತ್ರಿಸಿದರೆ, ಅಂತ್ಯದಲ್ಲಿ ಕವನ ಪಡೆದುಕೊಳ್ಳುವ ತಿರುವು ಬೇರೆಯೇ. 'ಬೌದ್ಧತತ್ವ'ವನ್ನು ಒಪ್ಪಿಕೊಳ್ಳದ ಮನಸ್ಸುಗಳನ್ನು ಕವಿ ಇಲ್ಲಿ ಖಂಡಿಸುತ್ತಾರೆ. ನಿರಂತರವಾಗಿ ಅಸಮಾನತೆಯನ್ನು ಉಳಿಸಿಕೊಂಡು ಬಂದಿರುವ ಆ ಮೂಲಕ ಸಮಾಜದಲ್ಲಿ ಅಶಾಂತಿಗೆ ಕಾರಣವಾಗಿರುವ ಮನಸುಗಳು ಬೌದ್ಧತತ್ವವನ್ನು ಹತ್ತಿಕ್ಕಲು ನಡೆಸುವ ಹುನ್ನಾರವನ್ನು ಗುರುತಿಸಿದೆ. 'ಬುದ್ಧ'ನನ್ನು ಎಲ್ಲಾ ರೀತಿಯಲ್ಲೂ ಸ್ವೀಕರಿಸುವ ಆಧುನಿಕ ಕವಿಯತ್ರಿಯರು ಜ್ಞಾನೋದಯಕ್ಕಾಗಿ ಹೆಂಡತಿ ಮಗನನ್ನು ತೊರೆದು ಹೋದದ್ದು ಸರಿಯಲ್ಲ ಎಂಬ ತಾತ್ವಿಕ ಸಿಟ್ಟನ್ನು ತಮ್ಮ ಕವನಗಳಲ್ಲಿ ವ್ಯಕ್ತಪಡಿಸುತ್ತಾರೆ. ಸಂಸಾರವನ್ನು ತೊರೆದು ಹೋಗಿ ಜ್ಞಾನಿಯಾಗುವ ಬುದ್ಧನಿಗಿಂತ ಸಂಸಾರದಲ್ಲಿದ್ದುಕೊಂಡೇ ಸಾಧನೆ ಮಾಡಿದ ಯಶೋಧರೆ ಇವರಿಗೆ ಮುಖ್ಯವಾಗುತ್ತಾಳೆ.

ಯೌವ್ವನ ತುಂಬಿದ ಪ್ರೀತಿಯ ಮಡದಿ
ಹಾಲುಗಲ್ಲದ ಹಸುಳೆ ಭೋರಿಡುತ್ತಾ
ಅಡ್ಡಗಟ್ಟಿ ಸೆರೆಗೊಡ್ಡಿ ಬೇಡಿದಾಗ
ಎಳ್ಳಷ್ಟು ಕರುಣೆ ಬಾರಲಿಲ್ಲವೇ?
(ಯಶೋಧರೆಯ ತುಮುಲ, ಮಹಾಮೌನ, ಪುಟ ೧೫೩)

'ಬುದ್ಧ'ನಂತಹ ಯಶಸ್ವೀ ಪುರುಷನ ಹಿಂದಿರುವ ಮಹಿಳೆಯ ಮನಸ್ಥಿತಿಯನ್ನು ವಿವರಿಸುವಾಗ ನಮ್ಮ ಪರಂಪರೆ ಹಿಂದೆ ಉಳಿಯುತ್ತದೆ. ಆದರೆ ಮಹಿಳಾ ಕವಿಗಳು ಅಂತಹ ವ್ಯಕ್ತಿತ್ವಗಳಿಗೂ ದನಿ ನೀಡಿದ್ದಾರೆ. ಇದೇ 'ಬುದ್ಧ'ನನ್ನು ಎಸ್.ವಿ. ಪ್ರಭಾವತಿ ಅವರು ವಾಸ್ತವಿಕ ನೆಲೆಯಲ್ಲಿ ಚಿತ್ರಿಸುತ್ತಾರೆ. ಯಶೋಧರೆಯನ್ನು ಬಳಕೆಯ ವಸ್ತುವನ್ನಾಗಿ ನೋಡಿದ್ದರ ಬಗೆಗೆ ಮಾತ್ರವಲ್ಲದೆ, ಅವಳಿಗಾದ ಸಂಕಟ, ಅನ್ಯಾಯ ನೋವುಗಳ ಬಗೆಗೆ ಕವಿಯಿತ್ರಿಗೆ ಅಕ್ರೋಶವಿದೆ.

ನೀನು ಮಲಗಿದ್ದೆಯಂತೆ
ನಿನ್ನ ಮಗನಾಗಿ ಬಿಡುಗಣ್ಣು ಬಿಟ್ಟು
ನಾ ದಿಟ್ಟಿಸಿದಾಗ ನೀನು ಆ
ಲೋಕಕ್ಕೆ ಹಾರಿದ್ದೆ
ಈಗ ನನಗೆ ತಿಳಿದಿದೆ
ತಾಯಿ, ಹೆಂಡತಿ, ಮಗ ಎಲ್ಲರೂ ನಿನಗೆ ಮೆಟ್ಟಿಲಾದೆವು
ಜಗದಗಲ ಮುಗಿಲಗಲ ಮಿಗೆಯುಗಲದ
ಮಹಡಿ ಮನೆಯ ಏಣಿಯ ಮೆಟ್ಟಿಲಾದೆವು ನಾವು
ನಿನ್ನನ್ನು ಜಗಕ್ಕಿತ್ತೆವು ನಾವು
.........................
ನಮ್ಮನ್ನು ನೆನೆ ನೆನೆದು ಕೃತಜ್ಞವಾಗಿದೆ ಮೂಕವಾಗಿದೆ.
(ಮೆಟ್ಟಿಲುಗಳು, ಮಹಾಮೌನ ಪುಟ ೧೦೩)

ಬುದ್ಧನ ಸಾಧನೆಯ ಪಥದಲ್ಲಿ ಮೆಟ್ಟಿಲುಗಳಾದ ಪ್ರಜಾಪತಿ ಗೌತಮಿ, ಮಗ ರಾಹುಲ ಮತ್ತು ಯಶೋಧರೆಯ ತ್ಯಾಗವನ್ನು ಉದ್ದೇಶ ಪೂರ್ವಕವಾಗಿಯೇ ತೆರೆಮರೆಯಲ್ಲಿಟ್ಟಿದ್ದಾರೆಂಬ ಬಗ್ಗೆ ಬೇಸರ ಕೂಡ ಕವನದಲ್ಲಿ ಧ್ವನಿಸುತ್ತಿರುವಂತೆ ಭಾಸವಾಗುತ್ತದೆ. ಡಾ. ಎಚ್.ಎಲ್. ಪುಷ್ಪ ಅವರು 'ಬುದ್ಧ'ನ ವೈರಾಗ್ಯದ ಕುರಿತ ಸ್ಥಾಪಿತ ಚರಿತ್ರೆಗಳಿಗೆ ಪರ್ಯಾಯವಾಗಿ ಇನ್ನೊಂದು ಚರಿತೆಯನ್ನು ಕಟ್ಟಿಕೊಡುವ ಕೆಲಸವನ್ನು ಮಾಡುತ್ತಾರೆ. ಇದಕ್ಕೆ ಪೂರಕವಾಗಿ ಕವನದ ಅಡಿ ಟಿಪ್ಪಣಿಯಲ್ಲಿ ಕಪಿಲವಸ್ತು ಮತ್ತು ಕೊಲಿಯಾಗಳ ನಡುವೆ ಹರಿಯುತ್ತಿದ್ದ ರೋಹಿಣಿ ನದಿಯ ನೀರು ಯಾರಿಗೆ ಸೇರಬೇಕು ಎಂಬ ವಿವಾದದ ವಿವರಣೆ ಇದೆ.

.........................
ಕೊಲೆಗೆ ಕೊಲೆ, ಜೀವಕ್ಕೆ ಜೀವ
ಸಾವಿಗೆ ಸಾವು, ಯುದ್ಧಕ್ಕೆ ಯುದ್ಧ
ನೀಲನಕ್ಷೆಯ ಖಾಲಿಪಾಯದಲ್ಲಿ
ಸುರಿಯಲಾಗಿದೆ ಇಟ್ಟಿಗೆ, ಮರಳು
ಬರಿಯ ಸಿದ್ಧಾರ್ಥ ನಾನು, ಬುದ್ಧನಲ್ಲಿ
ನನ್ನ ಮುದ್ದುಕುವರ ಮಡಿಲಲ್ಲಿ
ಕನಸುಗಣ್ಣಿನ ಯಶೋಧರೆ ಪಕ್ಕದಲ್ಲಿ
ಕಣ್ಣೆದುರಲ್ಲಿದೆ ಕೊಲಿಯಾ ಕಪಿಲವಸ್ತುಗಳ
ಕೆಂಪೇರಿದ ಕಣ್ಣುಗಳು
ರೋಗ, ಮುಪ್ಪು, ಸಾವು ಕಾಡಿದ್ದು ನಿಜ
ನದಿಯ ನೀರಿಗಾಗಿ ಕೊಲ್ಲಲಾರೆ
ನನ್ನ ಮತ್ತೊಬ್ಬ ಸೋದರನನ್ನು
ಕತ್ತಿ ಹಿಡಿಯಲಾರೆ ನಾನು ಜೀವ ಜಲಕ್ಕಾಗಿ
ತೆಗೆದುಕೊಳ್ಳಲಾರೆ ಇವರ ಜೀವಜಲಕ್ಕಾಗಿ
(ಬುದ್ಧನದಿಯ ಹಾಡು, ಲೋಹದಕಣ್ಣು, ೨೦೦೯, ಪುಟ ೩೩)

ಹೀಗೆ ಮುಂದುವರೆಯುವ ಈ ಕವಿತೆ ವಾಚ್ಯವಾಗಿ ಸನ್ನಿವೇಶವನ್ನು ಸಮಕಾಲೀನಗೊಳಿಸುತ್ತದೆ. ಜೀವ–ಜಲಕ್ಕಾಗಿ ದೇಶ–ದೇಶ, ರಾಜ್ಯ–ರಾಜ್ಯಗಳ ನಡುವೆ ನಡೆಯುವ ಸಮಸ್ಯೆಯನ್ನು ಅಂತರ್ಗತ ಮಾಡಿಕೊಂಡಿದೆ. ಸ್ವಾರ್ಥ, ಸ್ವಹಿತಕ್ಕಾಗಿ ಬಡಿದಾಡುವ ಜನರ ಮಧ್ಯೆ ಯಾವುದೇ ತಳಮಳವಿಲ್ಲದೇ, ತರಂಗಗಳಲ್ಲಿದೆ ಶಾಂತ ಭಿಕ್ಷುಣಿಯಾಗಿ ಹರಿಯುವ ರೋಹಿಣಿ ನದಿಯೇ ಬುದ್ಧನ ವೈರಾಗ್ಯದ ಮನೋಸ್ಥಿತಿಗೆ ಕಾರಣವಾಯಿತೆಂಬ ಸತ್ಯವನ್ನು ಈ ಕವನ ಬಿಚ್ಚಿಡುತ್ತದೆ.

ಕೋಮುವಾದ, ಜನಾಂಗೀಯವಾದ, ಮಹಿಳಾ ಅತ್ಯಾಚಾರ ಮುಂತಾದ ಸಾಮಾಜಿಕ ಅಸಮಾದಾನದ ಕಾಲಘಟ್ಟದಲ್ಲಿ 'ಬುದ್ಧ'ನ ಮರುಹುಟ್ಟು ಬಹು ಮುಖ್ಯ ಎಂಬುದು ಕವಿ ಸುಜಾತಗೌಡ ಅವರ ಅಭಿಪ್ರಾಯ.

ಈಗೊಮ್ಮೆ ಅವಸರಿಸಿ ಬಾ ಗೌತಮ
ಬುದ್ಧನಾಗಿ ಅಲ್ಲ ವೀರ ಕ್ಷತ್ರಿಯನಾಗಿ
.........................
.........................
ರಣದುಂದುಬಿಯ ಮೊಳಗಿಸುವ ಕೆಟ್ಟಿದೆಯ ಪ್ರಜೆಯಾಗಿ
ಬಾ .........................
ಈ ಎಲ್ಲಾ ಸಮಸ್ಯೆಯ ಶತ್ರುವನ್ನು ನಾಶಗೊಳಿಸಲು
ಒಂದಕ್ಕೆ ನೂರಾಗುವ ರಕ್ತಬೀಜಾಸುರನ ಸಂತಾನವನ್ನು
ಬುಡದಿಂದಲೇ ಕಡಿದೊಗೆಯ ಬಾ
ಭಾರತಾಂಬೆಯ ಹೆಮ್ಮೆಯ ಸಂತಾನವು ಕಂಡ
ರಾಮರಾಜ್ಯದ ಕನಸನ್ನು ಸಾಕ್ಷಾತ್ಕರಿಸು ಬಾ
ಬಾ ಬುದ್ಧ ಮತ್ತೊಮ್ಮೆ ಹುಟ್ಟಿ ಬಾ
('ಬುದ್ಧ ಮತ್ತೊಮ್ಮೆ ಹುಟ್ಟಿ ಬಾ', ಮಹಾಮೌನ, ಪುಟ ೧೩೩)

ಅಸಮಾನತೆಯ ಅಡಿಪಾಯದ ಮೇಲೆ ನಿಂತ ಇಂದಿನ ಸಾಮಾಜಿಕ ವ್ಯವಸ್ಥೆಯನ್ನು ಬದಲಾಯಿಸಲು 'ಬುದ್ಧ' ಇಂದು ಅನಿವಾರ್ಯ. ಹಾಗಾಗಿ ಈತ ಸಾಮಾನ್ಯ ಪ್ರಜೆಯ ರೂಪದಲ್ಲಿ ಮತ್ತೊಮ್ಮೆ ಹುಟ್ಟಿ ಜಾತಿಪದ್ಧತಿ ಮತ್ತು ವೈದಿಕರ ಧಾರ್ಮಿಕ ವ್ಯವಸ್ಥೆಗೆ ಬಲಿಯಾದ ಜನರನ್ನು ಮೇಲಕೆತ್ತಿ ಸನ್ಮಾರ್ಗಕ್ಕೆ ತರಬೇಕೆಂದು ಕವಿ ಇಲ್ಲಿ ಒತ್ತಾಯಿಸುತ್ತಾರೆ. ಇದೇ ರೀತಿಯ ಸಮಸ್ಯೆಯನ್ನು ಇಟ್ಟುಕೊಂಡು ಪಾರ್ವತಿಯವರು 'ಬುದ್ಧನಿಗೊಂದು ವಿನಂತಿ' ಕವನವನ್ನು ರಚಿಸಿದ್ದಾರೆ. ಅವರು ತಮ್ಮ ಕಾವ್ಯದಲ್ಲಿ ಮಹಿಳೆಯರ, ಅಲ್ಪಸಂಖ್ಯಾತರ ಮೇಲೆ ಆಗುತ್ತಿರುವ ದೈಹಿಕ ಹಿಂಸೆಯನ್ನು ವಾಚ್ಯವಾಗಿಯೇ ಬಿಚ್ಚಿಡುತ್ತಾರೆ. ಮೈತ್ರಿ, ಕರುಣೆಗೆ ಸಾಕಾರಮೂರ್ತಿಯಾದ 'ಬುದ್ಧ'ನ ತತ್ವಗಳನ್ನು ಅನುಸರಿಸದೆ ಪ್ರಸ್ತುತ ಸಮಾಜದಲ್ಲಿ ದ್ವೇಷ, ಅಸೂಯೆ, ದೌರ್ಜನ್ಯಗಳ ಮೂಲಕ ಅಶಾಂತಿಯನ್ನು ಸೃಷ್ಟಿಸುತಿದ್ದೇವೆ ಇಂತಹ ಅಸಮಾನತೆಯ ಸಮಾಜದಲ್ಲಿ ಬದುಕುವುದಕ್ಕಿಂತ ಸಾವು ಬರಬಾರದೇ ಎಂಬುದಾಗಿ ಕವಿ ಇಲ್ಲಿ ತಮ್ಮ ಅಸಾಯಾಕತೆಯನ್ನು ವ್ಯಕ್ತಪಡಿಸುತ್ತಾರೆ. ಇದೊಂದು ರೀತಿಯ ವ್ಯಂಗ್ಯವೂ ಹೌದು.

ಎಲ್ಲೆಂದರಲ್ಲಿ ಯುದ್ಧ ಕಾರ್ಗಿಲ್
ಸಿಡಿದಿದೆ ರಾಗ ದ್ವೇಷದ ಜ್ವಾಲೆ ಭುಗಿಲ್
ಸಜೀವ ದಹನ ಕಂಪಾಲಪಲ್ಲಿಯಲ್ಲಿ
.........................
ವರದಕ್ಷಿಣೆ ನೆಪದಲ್ಲಿ ಸ್ತ್ರೀಶೋಷಣೆ
.........................
ಮನುಷ್ಯ ಮನುಷ್ಯರನ್ನೇ ತಿನ್ನುವ ಕಾಲ
ಸಾಕಪ್ಪ ಸಾಕು ಸಾವು ಬರಲಿ ಅಕಾಲ
.........................
ಇಲ್ಲೇ ಇರು ಹೇಗಾದರೂ ಇರು
ಇಲ್ಲಿಗೆ ಬಂದು ಬಿಡು ದುಷ್ಟ ಶಕ್ತಿಗಳ ಓಡಿಸಿ
ತಪ್ಪಿಸು ನರಕದರ್ಶನ
ಮತ್ತೆ ಮಾಡಿಸು ದಿವ್ಯದರ್ಶನ ಎಂಬುದೇ
ನನ್ನ ಕಳಕಳಿಯ ವಿನಂತಿ
(ಮಹಾಮೌನ ಪುಟ, ೧೩೪)

'ಬುದ್ಧ' ಮಂಡಿಸಿದ ಚಿಂತನೆಗಳು ಶಾಂತಿಗೆ, ಸಮಾನತೆಗೆ, ಅಹಿಂಸೆಗೆ, ಪ್ರೀತಿಗೆ ಮತ್ತು ವೈಚಾರಿಕತೆಗೆ ಸಂಕೇತ. ದುಷ್ಟ ಶಕ್ತಿಗಳ ನರಕದರ್ಶನ ನಿಲ್ಲಬೇಕಾದರೆ ಆತನ ಚಿಂತನೆಗಳನ್ನು ಧರ್ಮಾತೀತವಾಗಿ ಪರಿಭಾವಿಸುವ ಅವಶ್ಯಕತೆ ಇದೆ ಎನ್ನುತ್ತಾರೆ ಕವಿಗಳು. ಮತ್ತೊಂವ ಕವಿ ಸರಸ್ವತಿ ಚಿಮ್ಮಲಗಿಯವರು ತಮ್ಮ 'ಸಿದ್ಧ-ಬುದ್ಧ' ಕವನದಲ್ಲಿ

ಇಪ್ಪತ್ತರ ಹರೆಯದಿ ಸಂಸತ್ತನು ಹೊಕ್ಕದೊರೆ
ಮತ್ತೆ ಹೆತ್ತಿಲ್ಲ ನಿನ್ನಂಥ ಸಿದ್ಧನ ಈ ಧರೆ
ಯುಗಯುಗಕೆ ಶಾಕ್ಯ ಸಿಂಹ ಬುದ್ಧನೊಬ್ಬನೆ ದೊರೆ
ನಿನ್ನ ಅಮರತ್ವ ಅರಿಯದವ ಈ ಧರೆಗೆ ಹೊರೆ
ಓ! ಬುದ್ಧ ಈ ಕುಬುದ್ಧಿ ಅಳಿಯಲು ಮತ್ತೆ ನೀನೆದ್ದು ಬಾ
(ಮಹಾಮೌನ ಪುಟ ೧೮೨

ಅಹಿಂಸೆಯ ಮೂಲಕ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಹಾಗೂ ರಾಜಕೀಯ ಸುಧಾರಣೆಯ ಬಗ್ಗೆ ಚಿಂತಿಸಿ, ಮಾನವನ ದುಃಖ ದುಮ್ಮಾನಗಳಿಗೆಲ್ಲ ಪರಿಹಾರ ತೋರಿದ ಮಾರ್ಗದಾತ 'ಬುದ್ಧ'. ಜಾತಿ ಮತಗಳ ಅಂತರ ಅಳಿಸಿ ಬುವಿಗೆ ಶಾಂತಿಯನ್ನು ತಂದವನು ಈತ. ಶಾಕ್ಯರು ಸ್ಥಾಪಿಸಿದ ಸಂಘದ ಮುಖಾಂತರ ನೀತಿಯೇ ಧರ್ಮದ ಸಾರವೆಂದು ಸಾರಿದವನು. ಆದರೆ ಈಗ ಪರಿಸ್ಥಿತಿ ಬದಲಾಗಿದೆ ಅರ್ಹನಲ್ಲದವನು, ಮಾನವೀಯತೆಯನ್ನು ಮರೆತವನು ಸಂಸತ್ತನ್ನು ಪ್ರವೇಶಿಸುತ್ತಿದ್ದಾನೆ. 'ಬುದ್ಧ'ನೆಂಬ ಮಹಾತ್ಮನ ಅಮರತ್ವ ಅರಿಯದವ ಈ ಧರೆಗೆ ದೊರೆ ಎಂದು ಇಂದಿನ ರಾಜಕೀಯ ಪರಿಸ್ಥಿತಿಯ ವ್ಯಂಗ್ಯವನ್ನು ಕವಿ ಇಲ್ಲಿ ಹಿಡಿದಿಟ್ಟಿದ್ದಾರೆ.

ಆಧುನಿಕ ಮನಸ್ಸು ಇಂದು ಜೀವವಿರೋಧಿ ಧೋರಣೆಯಿಂದ ಕೂಡಿದೆ. ಕೋಮುವಾದ, ಮೌಢ್ಯ, ಹಿಂಸೆ, ಬಡತನ, ಯುದ್ಧ ಇವುಗಳೇ ತುಂಬಿರುವ ಜಾಗತಿಕ ಸನ್ನಿವೇಶದಲ್ಲಿ ಬುದ್ಧನ ವ್ಯಕ್ತಿತ್ವವನ್ನು ಸಮಕಾಲೀನಗೊಳಿಸುವ ಮತ್ತು ಅದನ್ನು ಮುನ್ನೆಲೆಗೆ ತರುವ ಮತ್ತು ಮರು ರೂಪಿಸಿಕೊಳ್ಳುವ ಪ್ರಯತ್ನವನ್ನು ಇಲ್ಲಿನ ಮಹಿಳೆ ಕವನಗಳು ಮಾಡಿವೆ. ಜೀವ ಕಾರುಣ್ಯದ ಪರ್ಯಾಯ ಚಿಂತನೆಯಾಗಿ ಮೂಡಿ ಬಂದಿರುವ 'ಬುದ್ಧ'ನ ಚಿಂತನೆಗಳು ಇಂದಿನ ಹಿಂಸೆಗೆ ಪರಿಹಾರವಾಗಬಲ್ಲದು ಎಂಬದನ್ನು ಈ ಮಹಿಳಾ ಕಾವ್ಯಗಳು ಹೇಳುತ್ತದೆ.

ವಿಶ್ವಾತ್ಮಕ ಮೌಲ್ಯಗಳಲ್ಲಿ ತಾಯಿಭಾವ ಅನುಭವಿಸಿದ 'ಬುದ್ಧ' ಗುರು ಲೋಕಕ್ಕೆ ಅದನ್ನು ಉಣಬಡಿಸಿದವನು. ಶೋಷಿತರ ಮೇಲೆ ಕರುಣೆ, ವಾತ್ಸಲ್ಯ ತೋರುವುದಕ್ಕಾಗಿ ತನ್ನ ಬದುಕನ್ನು ಮುಡಿಪಾಗಿಟ್ಟವನು. ಹಾಗಾಗಿ ಬಹುತೇಕ ಮಹಿಳಾ ಕವಿಗಳು ತಮ್ಮ ನೋವನ್ನು 'ಬುದ್ಧ'ನಲ್ಲಿ ಹೇಳಿಕೊಂಡು ನಿರಾಳ ಭಾವ ಅನುಭವಿಸಿದ್ದಾರೆ. ಸಮಕಾಲೀನ ಜಗತ್ತಿನ ಸಾಮಾಜಿಕ ಅಸಮಾನತೆಗೆ ಪ್ರತಿರೋಧ ವ್ಯಕ್ತಪಡಿಸಲು 'ಬುದ್ಧ'ನನ್ನು ಅಸ್ತ್ರವಾಗಿ ಬಳಸಿಕೊಂಡಿದೆ. ಇಂದು ಜಾತಿಯ ಆಧಾರಲ್ಲಿ ಜನರ ನಡುವೆ ನಂಬಿಕೆ ಅಪನಂಬಿಕೆಗಳು ಸೃಷ್ಟಿಸಿ ಗೊಂದಲವನ್ನುಂಟು ಮಾಡಿದ್ದಾರೆ. ಗಲಭೆ, ಅಶಾಂತಿ, ತಲ್ಲಣದ ಪರಿಸ್ಥಿತಿಯಲ್ಲಿ ಬದುಕಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಒಟ್ಟಿನಲ್ಲಿ ಮಾನವ ಇಂದು ಎದುರಿಸುತ್ತಿರುವ ಎಲ್ಲಾ ಬಗೆಯ ಸವಾಲು, ಸಮಸ್ಯೆಗಳಿಗೆ 'ಬೌದ್ಧ ತತ್ವ' ಪರಿಹಾರವಾಗಬಲ್ಲವು ಎಂಬುದು ಇಲ್ಲಿನ ಬಹುತೇಕ ಕವಿತೆಗಳ ಆಶಯ.

**ಪರಾಮರ್ಶನ ಗ್ರಂಥಗಳು**


1. ಲಿಂಗಣ್ಣ ಗೋನಾಲ (೨೦೦೦) ಮಹಾಮೌನ, ಶರಣು ಪ್ರಕಾಶನ, ಗುಲಬರ್ಗಾ,
2. ಸಂಧ್ಯಾದೇವಿ (೨೦೦೫) ಮಾತು-ಚಿಟ್ಟೆ, ಅಧ್ಯಯನಮಂಡಲ, ಬೆಂಗಳೂರು,
3. ಸವಿತಾ ನಾಗಭೂಷಣ (೨೦೦೫) ದರುಶನ, ಲೋಹಿಯಾ ಪ್ರಕಾಶನ, ಬಳ್ಳಾರಿ
4. ರೂಪ ಹಾಸನ (೨೦೦೫) ಬಾಗಿಲಾಚೆಯ ಮೌನ, ಲೋಹಿಯಾ ಪ್ರಕಾಶನ, ಬಳ್ಳಾರಿ
5. ಪುಷ್ಪ.ಎಚ್.ಎಲ್ (೨೦೦೯) ಲೋಹದಕಣ್ಣು, ಲೋಹಿಯಾ ಪ್ರಕಾಶನ, ಗದಗ,
6. ರಾಮಲಿಂಗಪ್ಪ. ಬೇಗೂರು (೨೦೧೪) ಮಹಿಳೆ ಚರಿತ್ರೆ-ಪುರಾಣ, ಅಂಕಿತ ಪುಸ್ತಕ, ಬೆಂಗಳೂರು.